# ಮಂಗಳೂರು ಮಹಾನಗರಪಾಲಿಕೆ

ಮ.ನ.ಪಾ/ಉಪವಿಭಾಗ-3/ಸಿ.ಆರ್-11/2019-20

ದಿನಾಂಕ: 01-06-2019

ವಿಷಯ: ಒಳಚರಂಡಿ ಜೋಡಣೆಗೆ ಅನುಮತಿ ನೀಡುವ ಬಗ್ಗೆ.

ಉಲ್ಲೇಖ: 1. ಧರ್ಮಚಕ್ರ ಟ್ರಸ್ಟ್(ರಿ) ಫಾರ್ ಶ್ರೀ ಭಾರತಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ ಇವರ ಅರ್ಜಿ ದಿನಾಂಕ: 20-05-2019.

2. ಅಭಿಯಂತರರ ವರದಿ ದಿನಾಂಕ: 30-05-2019.

---****---

ಧರ್ಮಚಕ್ರ ಟ್ರಸ್ಟ್(ರಿ) ಫಾರ್ ಶ್ರೀ ಭಾರತಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್ ಇವರು ಕದ್ರಿ ಗ್ರಾಮದ ಮನೆ ನಂಬ್ರ 3-ಇ-9-704 ಗೆ ಒಳಚರಂಡಿ ಜೋಡಣೆಗಾಗಿ ಗುತ್ತಿಗೆದಾರರಾದ ಶ್ರೀ ಮರ್ವಿನ್ ನೋಯೆಲ್ ಪಿಂಟೊ ರವರ ಮುಖಾಂತರ ಅರ್ಜಿಯನ್ನು ಸಲ್ಲಿಸಲಾಗಿದೆ.

ಅರ್ಜಿದಾರರ ಒಳಚರಂಡಿ ಜೋಡಣೆ ಬಗ್ಗೆ ಈ ಕೆಳಗೆ ನಮೂದಿಸಿರುವ ಶುಲ್ಕವನ್ನು ಚಲನ್ ನಂಬ್ರ 11014MNGOC31052019 ದಿನಾಂಕ: 01-06-2019ರಂದು ಪಾವತಿಸಿದ ಮೇರೆಗೆ ಕೆಳಕಂಡ ಷರತ್ತುಗಳಂತೆ ಅರ್ಜಿದಾರರಿಗೆ ಒಳಚರಂಡಿ ಜೋಡಣೆಗೆ ಅನುಮತಿ ನೀಡಲಾಗಿದೆ, ಹಾಗೂ ಗುತ್ತಿಗೆದಾರರು ಈ ಕೆಳಗಿನ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಆದೇಶಿಸಲಾಗಿದೆ.

| | | |
|---|---|---|
| 1. ಏಕಕಾಲಿಕಾ ಒಳಚರಂಡಿ ಜೋಡಣಾ ಶುಲ್ಕ | : | ರೂ. 10000.00 |
| 2. ಮಣ್ಣಿನ ರಸ್ತೆ ಕಡಿತದ ಶುಲ್ಕ | : | ರೂ. 12000.00 |
| 3. ಡಾಂಬರು ರಸ್ತೆ ಕಡಿತದ ಶುಲ್ಕ | : | ರೂ. - |
| 4. ಕಾಂಕ್ರೀಟ್ ಚರಂಡಿ ಕಡಿತದ ಶುಲ್ಕ | : | ರೂ. - |
| 5. ಇಂಟರ್‌ಲಾಕ್ ಕಡಿತದ ಶುಲ್ಕ | : | ರೂ. - |
| 6. ಇತರೆ ಶುಲ್ಕ | : | ರೂ. - |
| ಒಟ್ಟು ಶುಲ್ಕ | : | ರೂ. 22000.00 |

<u>ಷರತ್ತುಗಳು:</u>

1. ಸಂಬಂಧಪಟ್ಟ ಒಳಚರಂಡಿ ಗುತ್ತಿಗೆದಾರರು ಮಹಾನಗರಪಾಲಿಕೆಯ ಸಂಬಂಧಿಸಿದ ಅಭಿಯಂತರರ ಸಮಕ್ಷಮದಲ್ಲಿ ಒಳಚರಂಡಿ ಜೋಡಣೆಯನ್ನು ಮಾಡತಕ್ಕದ್ದು.
2. ಯಾವುದೇ ಕಾರಣಕ್ಕಾಗಿ ಅನುಮೋದಿಸಲ್ಪಡದ ಸಾಮಾಗ್ರಿಗಳನ್ನು ಜೋಡಣೆಗೆ ಉಪಯೋಗಿಸತಕ್ಕದ್ದಲ್ಲ.
3. ರಸ್ತೆ ಕಡಿತ ಸಂದರ್ಭದಲ್ಲಿ ಸಾರ್ವಜನಿಕರಿಗೆ ಯಾವುದೇ ರೀತಿಯ ಅಡಚಣೆ ಆಗದಂತೆ ನಿಗಾವಹಿಸತಕ್ಕದ್ದು.
4. ಒಳಚರಂಡಿ ಜೋಡಣೆಯ ಕಂದಕವನ್ನು ಸಂಪೂರ್ಣವಾಗಿ ಮರಳಿನಿಂದ ತುಂಬಿಸಿ ವೈಬರೇಟರ್ ಮೂಲಕ ಗಟ್ಟಿಗೊಳಿಸತಕ್ಕದ್ದು.
5. ರಸ್ತೆ ಮಟ್ಟಕ್ಕಿಂತ 15 ಸೆಂ.ಮೀ ಕೆಳಗಡೆವರೆಗೆ ಒಳಚರಂಡಿ ಕಂದಕವನ್ನು ಕಾಂಕ್ರೀಟ್ 1:2:4 ಪ್ರಮಾಣದಲ್ಲಿ ಅಳವಡಿಸಿ ತುಂಬುವುದು.
6. ಒಳಚರಂಡಿ ಆಳುಗುಂಡಿಗೆ ಯಾವುದೇ ಹಾನಿಯಾಗದಂತೆ ನಿಗಾವಹಿಸತಕ್ಕದ್ದು.
7. ಮಳೆ ನೀರನ್ನು ಒಳಚರಂಡಿ ಮ್ಯಾನ್‌ಹೋಲ್‌ಗೆ ಜೋಡಿಸಲು ಯಾವುದೇ ಅವಕಾಶವಿರುವುದಿಲ್ಲ. ತಪ್ಪಿದ್ದಲ್ಲಿ ಯಾವುದೇ ಮುನ್ಸೂಚನೆ ನೀಡದೆ ಸಂಪರ್ಕವನ್ನು ಕಡಿತಗೊಳಿಸಲಾಗುವುದು. ಹಾಗೂ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
8. ಸದ್ರಿ ಜೋಡಣಾ ಕೆಲಸವನ್ನು ಮಳೆಗಾಲದ ಅವಧಿ ಮುಗಿದ ನಂತರ ರಸ್ತೆ ಕಡಿತ ಮಾಡಿ ಜೋಡಿಸತಕ್ಕದ್ದು.

ಇವರಿಗೆ,

ಧರ್ಮಚಕ್ರ ಟ್ರಸ್ಟ್(ರಿ) ಫಾರ್ ಶ್ರೀ ಭಾರತಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಶನ್, ಮನೆ ನಂಬ್ರ ಕದ್ರಿ 3-ಇ-9-704
ವಿವೇಕಾನಂದ ಕ್ರಾಸ್ ರೋಡ್
ಪದವು, ನಂತೂರು
ಮಂಗಳೂರು.

ಸಹಾಯಕ ಕಾರ್ಯಪಾಲಕ ಅಭಿಯಂತರರು
ಇಂಜಿನಿಯರಿಂಗ್ ಉಪವಿಭಾಗ-3
ಮಹಾನಗರಪಾಲಿಕೆ, ಮಂಗಳೂರು.

ಪ್ರತಿ: ಶ್ರೀ ಮರ್ವಿನ್ ನೋಯೆಲ್ ಪಿಂಟೊ
(ಗುತ್ತಿಗೆದಾರರು)

Scanned by CamScanner